ಶ್ರೀ ಕೆ. ಯೆಂಕಟಪ್ಪ.— ಸ್ವಾಮಿ. ಅವರಿಗೆ ಜಮೀನುಗಳನ್ನು ವಾಪಸ್ ಕೊಡುವುದರ ಬಗ್ಗೆ ಕಾನೂನು ಮಾಡಬೇಕೆಂದು ತಾವು ಮಾಡಿದ್ದೀವೆಂದು ಹೇಳಿದ್ದೀರಿ. ಯಾವ ಅವಧಿಯಿಂದ ಅದನ್ನು ಮಾಡುತ್ತೀರಿ ? ಸಾಕಷ್ಟು ಹಿಂದಿನಿಂದಲೂ ಭೂಮಿಯನ್ನು ಕಳೆದುಕೊಂಡಿರುವವರಿಗೆ, ವಾಪಸ್ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿ ಕೊಳ್ಳುವುದಿಷ್ಟೆ. ಈ ಸದನದ ಮುಂದೆ ಬಿಲ್ ಇದೆ. ದಯವಿಟ್ಟು ಅದನ್ನು ಓದಿ.

Fragmentation Act

506. SRI K. H. RAMAKRISHNAIAH (Turvekere).— Will the Minister for Revenue be pleased to state.—

whether it is under the consideration of the Government to exempt the ryots with one gunta land from the provisions of fragmentation Act. for construction of House ?

SRI B BASAVALINGAPPA (Minister for Revenue).— As per present law there is a provision for ryot to construct the house who have got one gunta land.

ಶ್ರೀ ಕೆ. ಎಚ್. ರಾಮಕೃಷ್ಣಯ್ಯ.— ಸ್ವಾಮಿ, ಇಲ್ಲಿ ತಾವು ಕೊಟ್ಟಿರತಕ್ಕ ಉತ್ತರ ಸರಿಯಾಗಿಲ್ಲ. ಎಷ್ಟೋ ಜನ ಬಡವರು ಒಂದು ಗುಂಟೆ ಜಮೀನನ್ನು ಕೊಂಡುಕೊಂಡು ಮನೆ ಕಟ್ಟಿಕೊಳ್ಳುವುದಕ್ಕೆ ಪರ್ಮಿಷನ್‌ಗೆ ಹಾಕಿದಾಗ ಫ್ರಾಗ್ಮೆಂಟೇಷನ್ ಆಕ್ಟಿಗೆ ಒಳಪಡದೇ ಅಲಯನಿಯೇಷನ್ ಮಾಡಿಕೊಡುವುದಿಲ್ಲ ಎಂದು ಹೇಳಿದ್ದಾರೆ, ಇದರಿಂದ ಬಡಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಒಂದು ಗುಂಟೆ ಭೂಮಿಯನ್ನು ಯಾರು ಬಡಜನರು ಕೊಂಡುಕೊಳ್ಳುತ್ತಾರೆ ಅವರಿಗೆ ಈ ಫ್ರಾಗ್ಮೆಂಟೇಷನ್ ಆಕ್ಟ್‌ನಿಂದ ಸಂಪೂರ್ಣ ವಿನಾಯಿತಿಯನ್ನು ಕೊಡುವಂತೆ ಆಜ್ಞೆ ಮಾಡುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಹೊಸಬರು. ಈ ಕಾನೂನು ಚೆನ್ನಾಗಿ ಓದಿ ಪ್ರಶ್ನೆ ಕೇಳಿದ್ದರೆ ಚೆನ್ನಾಗಿತ್ತು. Prevention of Fragmentation and Consolidation of holdings Act Section 9 ಪ್ರಕಾರವಾಗಿ ಇಂಥ ಒಂದು ತೀರ್ಮಾನವನ್ನು ಕೊಡುವುದಕ್ಕೆ ಡೆಪ್ಯುಟಿ ಕಮಿಷನರ್‌ಗೆ ಅಧಿಕಾರ ಉಂಟು. ಇದು ಅವರ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಅವರಿಗೆ ಅರ್ಜಿ ಕಳಿಸಿದರೆ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಗುಂಟೆ ಭೂಮಿ ಇರುವ ರೈತನಿಗೆ ಅವಕಾಶವಿದೆ.

Budget Provision for Road work in Shimoga District.

20. SRI G. BASAVANNAPPA (Holehonnur).—Will the Minister for Public Works be pleased to state :—

(*a*) amount provided in the budget provision during the year, 1977–78 for Road works in Shimoga District (Talukwise) ;

(*b*) the total amount spent upto the end of March 1978 ;

(*c*) amount provided in the budget during the year 1978–79; for the road works in Shimoga District (Taluk-wise) ?